**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಗರಿಬೊಮ್ಮನಹಳ್ಳಿ.**

**ಸಿ.ಸಿ.ಸಂಖ್ಯೆ 316/2019**

ಪಿರ್ಯಾದುದಾರರು : ರಾಜ್ಯದ ಪರವಾಗಿ ತಂಬ್ರಹಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1) ಹೊಳಗುಂದಿ ಗಂಗಪ್ಪ ಬಿನ್ ಹನುಮಂತಪ್ಪ ,
ವಯಸುಃ 50 ವರ್ಷ, ವೃತ್ತಿಃ ವ್ಯಾಪಾರಸ್ಥ ,

2) ಹೊಳಗುಂದಿ ಹನುಮೇಶ ಬಿನ್ ಗಂಗಪ್ಪ ,
ವಯಸುಃ 23 ವರ್ಷ, ವೃತ್ತಿಃ ಕೂಲಿ ಕೆಲಸ,

3) ಅಂಬಿಗರ ರಮೇಶ ಬಿನ್ ಗಂಗಮ್ಮ ,
ವಯಸುಃ 25 ವರ್ಷ, ವೃತ್ತಿಃ ಕೂಲಿ ಕೆಲಸ,

4) ಸೊಬಟಿ ಸಂತೋಷ ಕುಮಾರ ಬಿನ್ ರುದ್ರಪ್ಪ ,
ವಯಸುಃ 29 ವರ್ಷ, ವೃತ್ತಿಃ ಕೂಲಿ ಕೆಲಸ,

5) ಹಡಗಲಿ ಅನಂದ ಬಿನ್ ಸಣ್ಣ ರಾಮಪ್ಪ ,
ವಯಸುಃ 28 ವರ್ಷ, ವೃತ್ತಿಃ ಕೂಲಿ ಕೆಲಸ,
ಎಲ್ಲಾರೂ ವಾಸಃ ಹಂಪಸಾಗರ-3 ಗ್ರಾಮ ,
ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ .

**ದೋಷಾರೋಪಣೆ**

ಶ್ರೀಮತಿ ಭಾಗ್ಯಲಕ್ಷ್ಮಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ರಿಂದ 5 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 10-08-2019 ರಂದು ಮಧ್ಯಾಹ್ನ 03-00 ಗಂಟೆಗೆ ತಂಬ್ರಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಹಂಪಸಾಗರ-3 ಗ್ರಾಮದಲ್ಲಿ ಚಾಸಾ-1 ರವರು ಚಾಸಾ-4 ರವರ ನೇತೃತ್ವದಲ್ಲಿ 1 ನೇ ಆರೋಪಿಯಾದ ನಿಮ್ಮ ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ಪರಿಶೀಲಿಸುತ್ತಿರುವಾಗ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರ ಜೊತೆ ವಿನಾಕಾರಣ ದೊಂಬಿಯನ್ನುಂಟು ಮಾಡಿದ್ದು, ಈ ಮೂಲಕ 1 ರಿಂದ 5 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.143 ಮತ್ತು 147 ಹಾಗೂ ಸಹವಾಚಕ

ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರಿಗೆ ಅವಾಚ್ಯಶಬ್ಧಗಳಿಂದ ಬೈದು ಉದ್ದೇಶಪೂರ್ವಕವಾಗಿ ಅವರಿಗೆ ಅವಮಾನ ಮಾಡಿ ಶಾಂತಿಭಂಗವುಂಟು ಮಾಡಿದ್ದು, ಆದ್ದರಿಂದ 1 ರಿಂದ 5 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ರವರು 1 ನೇ ಆರೋಪಿಯಾದ ನಿಮ್ಮ ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ಪರಿಶೀಲಿಸುತ್ತಿರುವಾಗ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ತಳ್ಳಿದ್ದು, ಬಿಡಿಸಲು ಬಂದ ಚಾಸಾ-4 ಮತ್ತು ಚಾಸಾ-5 ರವರಿಗೆ, 1 ರಿಂದ 5 ನೇ ಆರೋಪಿತರಾದ ನೀವು ತಳ್ಳಾಡಿದ್ದು ಹಾಗೂ 2 ನೇ ಆರೋಪಿಯಾದ ನೀವು ನಿಮ್ಮ ಕೈಯಿಂದ ಚಾಸಾ-1 ರವರ ಮೈ ಮೇಲೆ ಹೊಡೆದಿದ್ದು ಹಾಗೂ 3 ರಿಂದ 5 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ತಳ್ಳಾಡಿ ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಮೂಲಕ 1 ರಿಂದ 5 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ರವರು 1 ನೇ ಆರೋಪಿಯಾದ ನಿಮ್ಮ ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ಪರಿಶೀಲಿಸುತ್ತಿರುವಾಗ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯಲು ಯತ್ನಿಸಿ ಅವರ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿದ್ದು, ಈ ಮೂಲಕ 1 ರಿಂದ 5 ನೇ ಆರೋಪಿತರಾದ ನೀವು

ಭಾರತ ದಂಡ ಸಂಹಿತೆ ಕಲಂ.353 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಐದನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ರವರು 1 ನೇ ಆರೋಪಿಯಾದ ನಿಮ್ಮ ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ಪರಿಶೀಲಿಸುತ್ತಿರುವಾಗ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರು ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ಬೆದರಿಸಿ ಸ್ವ-ಇಚ್ಛೆಯಿಂದ ಅವರ ಮೈ ಮೇಲೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಮೂಲಕ 1 ರಿಂದ 5 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.332 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಆರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ್ದರಿಂದ 1 ರಿಂದ 5 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 5 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 2 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 2 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 3 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 3 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 4 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 4 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 5 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 5 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ದಿನಾಂಕ : 18-02-2022

ಹಗರಿಬೊಮ್ಮನಹಳ್ಳಿ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.
ನ್ಯಾಯಾಲಯ ಹಗರಿಬೊಮ್ಮನಹಳ್ಳಿ

1 ನೇ ಆರೋಪಿ ಸಹಿ :

2 ನೇ ಆರೋಪಿ ಸಹಿ

3 ನೇ ಆರೋಪಿ ಸಹಿ :

4 ನೇ ಆರೋಪಿ ಸಹಿ :

5 ನೇ ಆರೋಪಿ ಸಹಿ :